ತಿಳಿಯದೆ ಅಳತೊಡಗಿದೆವು. ಒಮ್ಮೆ ಅಳುತ್ತಿದ್ದ ಅಜ್ಜನ ಕೈ ಹಿಡಿದು ಅತ್ತೆವು. ಇನ್ನೊಮ್ಮೆ ಕೇಶಪ್ಪಚ್ಚಿಯ ಕೈ ಹಿಡಿದೂ ಅತ್ತೆವು. ಆದರೂ ಕೇಶಪ್ಪಚ್ಚಿಯ ಪರ ವಹಿಸುವುದು ಅಪಾಯಕರವೆಂದು ಎಲ್ಲೋ ಹೊಳೆಯಿತು. ನಮ್ಮ ಸಾಹಸದ ನಾಯಕನ ಕೈ ಬಿಟ್ಟು ಅಜ್ಜನ ಆಸರೆಯೇ ಒಳ್ಳೆಯದೆಂಬಂತೆ, ನಾವು ನಿಷ್ಪಾಪಿಗಳೆಂಬಂತೆ ಅಜ್ಜನ ಕೃಪಾ ಕಟಾಕ್ಷ ಸೇರಿಕೊಂಡೆವು. ಕೇಶಪ್ಪಚ್ಚಿ ಹತಾಶ ಏಕಾಕಿಯಾಗಿ ನಮ್ಮೆದುರು ನಿಂತಿದ್ದ. ‘‘ಹೋಗು ನೀನು, ಇಲ್ಲಿಂದಲೇ ಹೊರಟುಬಿಡು. ಗೋಕರ್ಣಕ್ಕೆ ನಡೆ. ಮತ್ತೆ ನಮ್ಮ ಮನೆಗೆ ಕಾಲಿಡಕೂಡದು ನೀನು.’’

ಆಶ್ಚರ್ಯ! ಕೇಶಪ್ಪಚ್ಚಿ ಒಪ್ಪಿಕೊಂಡು ಬಿಟ್ಟ.

‘‘ತಡ ಯಾಕೆ? ಹೊರಟು ಹೋಗು’’ ಅಜ್ಜ ದನಿ ಎತ್ತರಿಸಿ ಕೂಗಿದರು.

ಯಾರನ್ನೂ ನೋಡದೆ ತದಡಿ ಊರಿನ ಕಡೆ ಮುಖ ಮಾಡಿ ಒಂದೆರಡು ನಿಮಿಷ ಹೋಗಿರಬಹುದು. ಅವನನ್ನು ನಾವು ನೋಡುತ್ತಲೇ ಇದ್ದೆವು. ಸರ್ರನೆ ಹಿಂದಿರುಗಿ ಬಂದು ಅಜ್ಜನ ಎರಡೂ ಕಾಲುಗಳನ್ನು ಹಿಡಿದುಕೊಂಡು ಅಳತೊಡಗಿದ.

‘‘ಏನು ಹೇಳು. ಹಣ ಬೇಕಾ?’’ ಅಜ್ಜ ಕೇಳಿದರು.

‘‘ಹಣ ಬೇಡವೇ ಬೇಡ. ನನ್ನ ಅಣ್ಣ, ಅತ್ತಿಗೆಗೆ ಈ ವಿಷಯ ತಿಳಿಸಬೇಡಿ, ಅಷ್ಟು ಸಾಕು. ಗೊತ್ತಾದರೆ ಅವರು ನನಗೆ ಹುರಿಹಗ್ಗ ಹಿಡಿದು ಹೊಡೆಯುತ್ತಾರೆ’’ ಅಜ್ಜನ ಕಾಲು ಹಿಡಿದು ಅಳುತ್ತಾ ಮತ್ತೆ ಮತ್ತೆ ಕೈ ಮುಗಿದು ಬೇಡಿಕೊಂಡ. ಅಜ್ಜ ಮತ್ತೊಮ್ಮೆ ಕಣ್ಣೊರೆಸಿಕೊಂಡರು. ‘‘ಹೋಗಪ್ಪಾ, ಯಾರಿಗೂ ಹೇಳುವುದಿಲ್ಲ. ನೀನೂ ನನಗೆ ಒಬ್ಬ ಮೊಮ್ಮಗನ ಹಾಗೆಯೇ. ಮತ್ತೊಮ್ಮೆ ಯಾವಾಗಲಾದರೂ ಬಾ. ಈಗ ಹೊರಡು’’ ಎಂದರು.

ತೀರದಲ್ಲೇ ದೂರ ನಿಂತು ಎಲ್ಲವನ್ನೂ ನೋಡುತ್ತಿದ್ದೆವು. ಕೇಶಪ್ಪಚ್ಚಿ ಅವನ ಅಣ್ಣ, ಅತ್ತಿಗೆಗೆ ಇಷ್ಟು ಹೆದರುವುದೇಕೆ, ದೊಡ್ಡವರೂ ಹೀಗೆ ಇಷ್ಟೊಂದು ಹೆದರುತ್ತಾರೆಯೇ, ದೊಡ್ಡವರು ದೊಡ್ಡವರಿಗೇ ಹೊಡೆಯುತ್ತಾರೆಯೇ, ಯಾಕೆ ಹಾಗೆ – ಏನೊಂದೂ ಅರ್ಥವಾಗದೆ ನದಿಯತ್ತ ತಿರುಗಿದೆವು. ನಮ್ಮನ್ನು ಈ ದಡಕ್ಕೆ ತಲುಪಿಸಿದ ಪಾತಿದೋಣಿ ಲೀಲೆಯಿಂದ ನದಿನೀರಲ್ಲಿ ಬಾಗಿ, ಬಳುಕಿ ನರ್ತಿಸುತ್ತಿರುವಂತೆ ಕಂಡಿತು. ಈ ದೋಣಿ ಮತ್ತು ಮಾದೇವಣ್ಣನ ದೋಣಿ ಎರಡೂ ಕಂಬಕ್ಕೆ ಕಟ್ಟಿದ್ದ ಹಸುಗಳಂತೆ ಒಮ್ಮೆ ಕಂಡವು, ಹೊಯ್ದಾಡುತ್ತಿದ್ದವು. ಅದರಲ್ಲೂ ನಮ್ಮ ಪಾತಿದೋಣಿ ವೀರ ಅಭಿಮನ್ಯುವಿನಂತೆ ಎಂದೊಮ್ಮೆ ಅನಿಸಿತು. ಹಾಗಾದರೆ ಮಾದೇವಣ್ಣನ ದೋಣಿ ಅರ್ಜುನನೇ ಸರಿ!

ಎಷ್ಟೋ ಹೊತ್ತು ಕಳೆದ ಮೇಲೆ ಹಿಂತಿರುಗಿ ನೋಡಿದರೆ ಕೇಶಪ್ಪಚ್ಚಿ ಕಾಣಿಸಲಿಲ್ಲ. ಆ ಕಡೆಗೇ ಮುಖ ಮಾಡಿ ಅಜ್ಜ ಅದೆಷ್ಟೋ ಹೊತ್ತು ನಿಂತಿದ್ದರು. ಯಾರೂ ಏನೂ ಮಾತಾಡದೇ ಅದೆಷ್ಟೋ ಕ್ಷಣಗಳು ಕಳೆದವು. ಕೆಳಗಿಟ್ಟ ಪಿಶವೆ (ಚೀಲ) ಕೈಗೆತ್ತಿಕೊಂಡರು, ‘‘ಏಳಿ, ಅಘನಾಶಿನಿಗೆ ಹೋಗುವಾ’’ ಎಂದು ಅಜ್ಜ ನಮ್ಮನ್ನು ಹೊರಡಿಸಿದರು.


## ಚಿಂತಾಮಣಿ ಕೊಡ್ಲೆಕೆರೆ

ಕವಿ, ಕತೆಗಾರ, ಪ್ರಬಂಧಕಾರ, ವಿಮರ್ಶಕ ಚಿಂತಾಮಣಿ ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದವರು. ‘ಬಭ್ರುವಾಹನ ಎಂಬ ಇರುವೆ’, ‘ಮಾಯಾವಿ ಮಾಂಗಿ’ ಅವರ ಕಥಾಸಂಗ್ರಹಗಳು, ‘ಸಿಂಡ್ರೆಲಾ ಅಂಬ್ರೆಲಾ’ ಮಕ್ಕಳ ಕವಿತೆಗಳ ಗುಚ್ಛ. ‘ಅಂತರಂಗದ ಆಕಾಶ’ ಸಂಶೋಧನಾ ಪ್ರಬಂಧ. ‘ಮೊದಲ ಮನೆಯ ಮೆಟ್ಟಿಲು’, ‘ಟಪಾಲು ಬಸ್ಸು’ ಪ್ರಬಂಧ ಸಂಗ್ರಹಗಳು. ಬಿಎಸ್‌ಎನ್‌ಎಲ್‌ನ ನಿವೃತ್ತ ಉದ್ಯೋಗಿ.